**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 85/2023

ಪಿಡಬ್ಲು :2 ಸಿಡಬ್ಲು :2

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಮಹಾದೇವ ಗುಜನಾಳ |
| ತಂದೆಯ ಹೆಸರು | : ಶ್ರೀ ಶಿವಲಿಂಗಪ್ಪ ಗುಜನಾಳ |
| ವಯಸ್ಸು | : 45 ವರ್ಷ |
| ಉದ್ಯೋಗ | : ಗ್ರೇಡ-I ಕಾರ್ಯದರ್ಶಿ, ಮಾರಿಹಾಳ ಗ್ರಾಮ ಪಂಚಾಯತಿ. |
| ವಾಸ್ತವ್ಯ | : ಮಾವಿನಕಟ್ಟಿ, ತಾಃಬೆಳಗಾವಿ. |
| ದಿನಾಂಕ | : 05-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

2023 ರಲ್ಲಿ ದಿ.07-01-2023 ರಂದು ಹೀರೆಬಾಗೆವಾಡಿ ಪೋಲಿಸರು ಪಂಚನಾಮಾ ಮಾಡುವ ಸಲುವಾಗಿ ನನ್ನನ್ನು ತಾರಿಹಾಳ ಗ್ರಾಮದಲ್ಲಿರುವ ಸುನಗಾರ ಗಲ್ಲಿಯಲ್ಲಿರುವ ಒಂದು ಮನೆಗೆ ಸಿ.ಪಿ.ಐ ರವರು ಕರೆದುಕೊಂಡು ಹೋದರು, ಅದು ಯಾರ ಮನೆ ಎಂದು ನನಗೆ ಗೊತ್ತಿರುವುದಿಲ್ಲ. ಯಾವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದು ನನಗೆ ಹೇಳಿರುವುದಿಲ್ಲ. ಪೋಲಿಸರು ನನ್ನನ್ನು ಕರೆದುಕೊಂಡು ಹೋಗಿದ್ದ ಮನೆಯಲ್ಲಿ ಪಂಚನಾಮಾ ಮಾಡಿದರು ಮತ್ತು ನನ್ನ ಸಹಿ ಮಾಡಿಸಿಕೊಂಡರು. ಪಂಚನಾಮಾ ಮಾಡಿದ ಸ್ಥಳದಲ್ಲಿ ಇದ್ದಂತಹ ಬೇರೆ ವ್ಯಕ್ತಿಗಳು ಯಾವುದೇ ವಿಚಾರ ಹೇಳಿರುವುದಿಲ್ಲ. ಸಿ.ಪಿ.ಐ ರವರು ಮನೆಯೊಳಗೆ ಬಿದ್ದಿದ್ದ ಎರಡು ಹಗ್ಗಳನ್ನು ಪೋಲಿಸರು ತೋರಿದರು ಸಿ.ಪಿ.ಐ ರವರು ಅದನ್ನು ಜಪ್ತು ಮಾಡಿದರು ಯಾವ ಕಾರಣಕ್ಕೆ ಹಗ್ಗವನ್ನು ಜಪ್ತು ಮಾಡಲಾಯಿತು ಎಂದು ನನಗೆ ಗೊತ್ತಿಲ್ಲ. ಮನೆಯ

ಮುಂದೆ ಪೋಲಿಸರು ಪೋಟೊ ತೆಗೆದರು. ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ.

2. ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪಂಚನಾಮೆಯು 4 ಹಾಳೆಗಳ ಮೇಲಿದ್ದು, ಸಾಕ್ಷಿ ಅದರ ಮೇಲೆ ತಮ್ಮ ಸಹಿ ಇರುವುದಾಗಿ ಗುರುತಿಸಿದ್ದಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–2 [ಬಿ] ಎಂದು ಗುರುತಿಸಲಾಯಿತು. ನಿಪಿ–3 ಪೋಟೊದಲ್ಲಿ ಸಾಕ್ಷಿ ತಮ್ಮ ಮತ್ತು ಚಾಸಾ–3 ಇರುವಿಕೆಯನ್ನು ಗುರುತಿಸಿದ್ದಾರೆ. ಪೊಲಿಸರನ್ನು ಮತ್ತು ಚಾಸಾ–3 ರವರನ್ನು ಹೊರತು ಪಡಿಸಿ ಪೋಟೊದಲ್ಲಿ ಕಾಣುವ ಇನ್ನೊಬ್ಬ ವ್ಯಕ್ತಿ ಯಾರು ಮತ್ತು ಅಲ್ಲಿ ಏಕೆ ಇದ್ದನು ಎಂದು ನನಗೆ ಗೊತ್ತಿಲ್ಲ.

3. ಪೋಲಿಸರು ನಮ್ಮನ್ನು ಗಣಪತಿ ಗಲ್ಲಿಯಲ್ಲಿರುವ ಇನ್ನೊಂದು ಮನೆಗೆ ಕರೆದುಕೊಂಡು ಹೋದರು ಅದು ಯಾರ ಮನೆ ಎಂದು ನನಗೆ ಗೊತ್ತಿಲ್ಲ. ಅಲ್ಲಿ ನನ್ನ ಸಹಿ ಮಾಡಿಸಿಕೊಂಡರು ಮತ್ತು ಪೋಟೊ ತೆಗೆದರು. ಅಲ್ಲಿ ಯಾವುದೇ ವಸ್ತುವನ್ನು ಜಪ್ತು ಮಾಡಿರುವುದಿಲ್ಲ. ಗಣಪತಿ ಗಲ್ಲಿಯಲ್ಲಿನ ಮನೆ ಮುಂದೆ ಪೋಟೊ ತೆಗೆದರು ಎಂದು ಹೇಳಿ ನಿಪಿ–4 ಪೋಟೊವನ್ನು ಗುರುತಿಸಿದ್ದಾರೆ. ನಿಪಿ–4 ಪೋಟೊದಲ್ಲಿ ಒಬ್ಬ ಹೆಣ್ಣು ಮಗಳು ಆಕೆಯೊಂದಿಗೆ ಒಬ್ಬ ವ್ಯಕ್ತಿ ಯಾಕೆ ಇದ್ದರು ಎಂದು ನನಗೆ ಗೊತ್ತಿಲ್ಲ.

4. ನಿಪಿ–5 ರಿಂದ 8 ಪೋಟೊಗಳಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ಗುರುತಿಸಿ ಅವುಗಳನ್ನು ಗಣಪತಿಯಲ್ಲಿರುವ ಮನೆಯ ಒಳಗೆ ತೆಗೆದ ಪೋಟೊ ಎಂದು ಗುರುತಿಸಿದ್ದಾರೆ. ನಿಪಿ–6 ಮತ್ತು 7 ಪೋಟೊಗಳಲ್ಲಿ ಕಾಣುವ ವಸ್ತುಗಳ ಬಗ್ಗೆ ಯಾರೂ ಏನು ಹೇಳಿರುವುದಿಲ್ಲ. ಪೋಲಿಸರ ಜಪ್ತು ಮಾಡಿಕೊಂಡ ಎರಡು ಹಗ್ಗಗಳನ್ನು ಈಗ ಗುರುತಿಸಲು ಆಗುವುದಿಲ್ಲ. ಈಗ ನಾನು ಹೇಳಿದ ಎರಡು ಸ್ಥಳಗಳನ್ನು ಹೊರತು ಪಡಿಸಿ ಬೇರೆ ಸ್ಥಳಕ್ಕೆ ಪೋಲಿಸರು ನನ್ನನ್ನು ಕರೆಸಿರುವುದಿಲ್ಲ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಈ ಸಾಕ್ಷಿಯ ಸಾಕ್ಷಿ ಹೇಳಿಕೆಯನ್ನು ಪರಿಗಣಿಸಿದ್ದು ಸಾಕ್ಷಿಯು ವ್ಯತೀರಿಕ್ತವಾಗಿ ಹೇಳಿಕೆ ನೀಡಿದ್ದರಿಂದ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದ**

ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲಿಗೆ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.